RegdNo B 6155

(147) 2

9–8–1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು – ಅರಮನೆ ಸಿಂಸ್ಕೇದಾರ್ ಎಂ ವಿ ಸುಬ್ಬರಾಯರು ಸಂಪಾದಕರು – ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್ 2ಪೈಸೆ

ರೇಷನಿಂಗಿನಿಂದ ದೇಶಕ್ಕೆ ಹಿಂದೆ ಕಹಿಯಾದ ಪಾಠ

ಅಹಮದಾಬಾದಿಗೆ ಸುಮಾರು 35 ಮೈಲಿಗಳ ದೂರದಿಂದ ನಡಿಯಾಡಿನಲ್ಲಿ ಅಖಿಲ ಭಾರತ ಆಹಾರ ಧಾನ್ಯಗಳ ಸಂಘಗಳ ಅಧ್ಯಕ್ಷರಾದ ಶ್ರೀ ಎಂ ಹೆಚ್ ಹಾಷಿಂ ಪ್ರೇವ ಜಿಯವರು ಗುಜರಾತು ವರ್ತಕರ ವಾರ್ಷಿಕಾಧಿವೇಶನದಲ್ಲಿ ಮಾತನಾಡುತ್ತಾ, ರೇಷನಿಂಗು ವಿಚಾರದಲ್ಲಿ ದೇಶದೊಡ್ಡದಾದ ಕಹಿಯಾದ ಪಾಠ ಕಲಿತಿದೆ ಎಂದರು ರೇಷನಿಂಗಿನಿಂದ ಸರ್ಕಾರಕ್ಕೆ ಹೆಚ್ಚು ಖರ್ಚು, ಕೊರ್ಳುವವರಿಗೆ ಹಿಂಸೆ ವಿಶೇಷ, ಉತ್ಪಾದಕರಿಗೆ ನಿರಾಸಕ್ತಿ ಉಂಟಾಗುವುದು ಎಂದರು. ಮುಖ್ಯ ಮಂತ್ರಿಗಳು ರೇಷನಿಂಗು ತರಬೇಕೆಂದು ಪೂರ್ವದಿಂದ ಶ್ರೀವರ್ಧನದಿಂದ ಮೇಲೆ ತೀವ್ರ ಪರಿಣಾಮವಾಗುವುದಾಗಿ ಅವರು ತಿಳಿಸಿದರು

ಲಂಚ ಕಳ್ಳಪೇಟೆ ಏರುವುದು

ಆಹಾರ ರೇಷನಿಂಗನ್ನು ಸ್ವತಂತ್ರ ತತ್ವಶಃ ವಿರೋಧಿಸುವುದೆಂದು ಸ್ವತಂತ್ರ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ಮಸಾನಿಯವರು ನಿನ್ನೆ ರಾಜಕೋಟಿಯಲ್ಲಿ ತಿಳಿಸಿದರು ರೇಷನಿಂಗಿನಿಂದ ಲಂಚ ಹಾಗೂ ಕಾಳ ಸಂತೆ ಹೆಚ್ಚುವುದಾಗಿ ಅವರು ತಿಳಿಸಿದರು

❁

೦೪೫ ಸಹಾಯ ದೊಡನೆ ಭಾರತದಲ್ಲಿ ಜೋಡಿಸುವ ಪ್ರಥಮ ಎಂ೦ಐ ಜಿ ಯು೪ ಮುಂದಿನ ವರ್ಷ ಮಧ್ಯದಲ್ಲಿ ಆಗುವುದೆಂದು ನವದೆಹಲಿ ವಾರ್ತೆ.

★

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಪಕ್ಷ, ಜ್ಯೋತಿರ್ವಿದ್ಯಾನಿಧಿ
ಸಂಪಕ್ಕ ಕೃಷ್ಣಜೋಯಿಸರಿಂದ

10 ಮಂಗಳವಾರ ಕೃಷ್ಣೋದಶಿ ಉಷಾ

ರಾಜ್ಯಕ್ಕೆ ರಾಷ್ಟ್ರಪತಿ

ಮೈಸೂರು ರಾಜ್ಯದಲ್ಲಿ ವಿಶ್ರಾಂತಿ ಪಡೆಯಲು ರಾಷ್ಟ್ರಪತಿ ಡಾ॥ ರಾಧಾಕೃಷ್ಣನ್ನು ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಆಹ್ವಾನಿಸಿರುವರು ಅವರು ಸೆಪ್ಟೆಂಬರಿನಲ್ಲಿ ಆಗಮಿಸಿದಾಗ ಮೈಸೂರು ನಗರ ಅಥವಾ ನಂದಿ ಬೆಟ್ಟ ಅಥವಾ ಬೆಂಗಳೂರು ನಗರದಲ್ಲೇ ವಿಶ್ರಾಂತಿ ಪಡೆಯುಲು ಅವಕಾಶ ಮಾಡಲಾಗುವುದು.

❁

ಪ್ರಾಣಾರ್ಪಣೆ

ಪಂಜಾಬಿನ ಭಟಿಂಡಾ ದಿಂದ ಬಂದ ವಾರ್ತೆ ಪ್ರಣಯದ್ರೋಹ ಯುವಕ ನೊಬ್ಬನು ಮೈಗೆ ಸೀಮೆ ಎಣ್ಣೆ ಸುರಿದು ಕೊಂಡು ಶುಕ್ರವಾರ ರಾತ್ರಿ ಜನಸಂದಣಿಯಿದ್ದ ರಸ್ತೆಯಲ್ಲಿ ಸಿಟ್ಟಿಕೊಂಡು ಮರಣವನ್ನು ಹೊಂದಿದನು. ಪೋಲಿಸರು ಪ್ರಕಾರ ಯುವಕನ ವಯಸ್ಸು 25 ಈಗ ಎರಡು ತಿಂಗಳು ಹಿಂದೆ ಅಕನ ಕಡೆ ಸ್ನೇಹಯಾಲಯದಲ್ಲಿ ಹೇಳಿಕೆಯಿತ್ತ ಹುಡುಗಿ ಅಕನಿಗೆ ಪ್ರಣಯದ್ರೋಹ ಮಾಡಿದಳು

★

ದುರುದ್ದೇಶ

ಪಶ್ಚಿಮ ಬಂಗಾಳದ ಗಡಿಯಲ್ಲಿ ಗಡಿ ಕಲಹ ಹೊಂದಿರಲು ಪಾಕಿಸ್ತಾನ ದುರುದ್ದೇಶ ಹೊಂದಿರುವುದಾಗಿ ಕಲ್ಕತ್ತಾ ವಾರ್ತೆ; ನಷ್ಟಾ ಚಂದ್ರಮಂದಲ್ಲಿ 20 ಸ್ಕೇರ್ ಭೂಮಿಯನ್ನು ತನ್ನದೆಂದು ಪಾಕಿಸ್ತಾನ ಕೇಳಿರುವುದಾಗಿ ವರದಿ

★

ಕಳೆದ 4 ತಿಂಗಳುಗಳಲ್ಲಿ ವಂದಾನ ಕೆರೆಗಳು ಅಧಿಕಾರಿಗಳು 7 ಲಕ್ಷ ರೂಪಾಯಿಗಳ ಕಾಳ ಹಣ ಪತ್ತೆ ಮಾಡಿರುವುದಾಗಿ ಎರ್ನಾಕುಲಂ ವಾರ್ತೆ.

ಬಂಧನ -

ಭೂತಾನು ದೊರೆಗಳ ಪ್ರಾಣಾಪಾಯ ಪ್ರಯತ್ನ ಸಂಬಂಧಪಟ್ಟಂತೆ ವಾರೋವಿನಲ್ಲಿ ಬಂಧಿಸಿದೆ ಬಂಧಿತರ ಒಟ್ಟು ಸಂಖ್ಯೆ 60 ಎಂದು ಗಾಂಗ್ಟಾಕಿನಿಂದ ವಾರ್ತೆ ಬಂದಿದೆ.

ಹೊಸ ಗಡಿಯಾರ

25 ಸೆಂ.ಟ್ ಬೆಲೆ ಬ್ಯಾಟರಿಯಿಂದ 6 ವರ್ಷ ನಡೆಯುವ ಒಂದು ಗೋಡೆ ಗಡಿಯಾರವನ್ನು ಒಬ್ಬ ಫಿನಿಷ್ ಯಂತ್ರದ ಕೆಲಸಗಾರನು ಕಂಡು ಹಿಡಿದಿರುವನು ಅದರಲ್ಲಿ ಸವೆದುಹೋಗುವ ಪದಾರ್ಥಗಳಿಲ್ಲವಾದ್ದರಿಂದ ವರ್ಷಾಕಾಲ ನಡೆಯುವುದೆಂದು ಹೆಲ್ಸಿಂಕಿ ವಾರ್ತೆ.

ರೇಷನಿಂಗು

ಗಣಿ ಪಟ್ಟಣವಾದ ಕೋಲಾರ ಚಿನ್ನದ ಗಣಿಯ ಪ್ರದೇಶದಲ್ಲಿ ಕ್ರಮಬದ್ಧ ವಿತರಣೆಯನ್ನು ಕಂಡು ಪ್ರಯತ್ನ ಮಾಡಲಾಗುವುದು. ಎಂದು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಬೆಂಗಳೂರಿನಲ್ಲಿ ನಿನ್ನೆ ಪತ್ರಿಕೆಯವರಿಗೆ ತಿಳಿಸಿದರು.

ದಂಡ

ಇಂಗ್ಲೆಂಡಿನ ಬ್ರಿಡ್‌ಫೋರ್ಡಿನಿಂದ ಈ ವಾರ್ತೆ ಬಂದಿದೆ. ಪೋಲೀಸಿನವನೊಬ್ಬನು ಸಿಳ್ನವನೊಬ್ಬನ ರುಮಾಲು ತೆಗೆದು ಅವಮಾನಪಡಿಸಿದ ಆರೋಪಣೆಯ ಮೇಲೆ ಜಡ್ಜರು ಐವತ್ತು ಪೌಂಡು ದಂಡ ಹಾಕಿ ಕೊಡುವಂತೆ ಆಜ್ಞೆ ಮಾಡಿದರು.

ನೆರವಿನ ಭರವಸೆ

ಭಾರತಕ್ಕೆ ಎಲ್ಲ ಕ್ಷೇತ್ರಗಳಲ್ಲೂ ನೆರವನ್ನು ಕೊಡುವುದಾಗಿ ಅಧ್ಯಕ್ಷ ವಿಲಿಯಂ ಜಾನ್ಸನ್ ಹೇಳಿರುವುದಾಗಿ ಅರುಣ ಅಸಫ್ ಅಲಿ ಪತ್ರಿಕೆಯವರಿಗೆ ತಿಳಿಸಿದರೆಂದು ಮೂಸ್ಕೋ ವಾರ್ತೆ.

ವಾರ್ತಾ ವಿಶೇಷಗಳು

ವೋಟಾರು ವಾಹನ ಇಲಾಖೆಯ ಎಂಟು ಮಂದಿ ಇನ್‌ಸ್ಪೆಕ್ಟರರ ಮನೆಯಲ್ಲಿ ಶೋಧಿಸಲಾಗಿ 2 ಲಕ್ಷದ 10 ಸಾವಿರ ರೂಪಾಯಿಗಳ ಕರೆನ್ಸಿ ನೋಟುಗಳು ಮತ್ತು ಸಹಸ್ರ ರೂಪಾಯಿಗಳ ವಿದ್ಯುತ್ ಗಜಿಟ್‌ಗಳನ್ನು ವಶಪಡಿಸಿಕೊಂಡರೆಂದು ನವ ದೆಹಲಿ ವಾರ್ತೆ.

★

ಕೆಲವು ಆಫ್ರೋ-ಏಷ್ಯ ದೇಶಗಳಲ್ಲಿ ಅವಿರಿಕಾದ ಅಕ್ರಮಣಗಳನ್ನು ಪ್ರತಿಭಟಿಸಿ ಹದಿನೈದು ಸಾವಿರ ಇಂಡೋನೇಷಿಯನ್ನರು ಜಕಾರ್ತಾದಲ್ಲಿ ಅಮೆರಿಕಾ ರಾಯಭಾರಿ ಕಚೇರಿಯ ಮುಂದೆ ಪ್ರದರ್ಶನ ನಡೆಸಿದರು.

❁

ಅವಾಂಗ ಗ್ರಾಮದಲ್ಲಿ ಸ್ಥಳದ ತಪಾಸಣೆಯಲ್ಲಿನ ಜಗಳದಲ್ಲಿ ಗುಂಡಿಸಲಿಗೆ ಬೆಂಕಿಯನ್ನು ಹೊತ್ತಿಸಿದಾಗ ಅದನ್ನಾರಿಸಲು ಬಂದ ಭಿಕ್ಷಾಟ ಬಾಬರು ಕಾಂದಾಷನನ್ನ ಬೆಂಕಿಯಲ್ಲಿ ಹಾಕಿ ಜೀವಸಹಿತ ಸುಟ್ಟು ಅಪಾದನೆಗಾಗಿ ನಲವತ್ತು ಮಂದಿ ಬಂಧಿತರಾದರೆಂದು ಲಕ್ನೋ ವಾರ್ತೆ.

❁

ವಿಯೆಟ್ನಾಂನಲ್ಲಿ ಶಾಂತಿ ಸ್ಥಾಪನೆ ಮಾಡಲು ಉತ್ಸಾಹದಿಂದ ಪ್ರಯತ್ನ ನಿಲ್ಲುವುದೇ ಮಾರ್ಗವೆಂದು ಅಧ್ಯಕ್ಷ ಜಾನ್ಸನ್ ರವರು ಫಾನಾ ವಿದೇಶಾಂಗ ಮಂತ್ರಿಯವರಿಗೆ ತಿಳಿಸುವರೆಂದು ವಾಷಿಂಗ್ಟನ್ನಿನ ವಾರ್ತೆ.

❁

ಜರ್ಮನಿಯ ಪೂರ್ವದ ಭಾಗದಲ್ಲಿ ಪದನಸ್ಯಂಭ ರೇಖೆಯ ಸುಗ್ಗಿದ 50-60 ಮಂದಿ ಪೂರ್ವ ಆಯುಧಧಾರಿಗಳಾದ ಪಾಕಿಸ್ತಾನಿಗಳಿಗೂ ಭಾರತ ಸೈನ್ಯ ಉತ್ತರವಾರಿಯಾಗಿಯೂ ಪರ್ವತಪ್ರದೇಶದಲ್ಲಿ ಅರು ಮಂದಿ ಪಾಕಿಸ್ತಾನಿಗಳು ಮರಣಹೊಂದಿದರು

ಆಹಾರ ಸಂಶೋಧನಾಲಯಕ್ಕೆ ಶ್ರೀ ಚಾಗ್ಲಾರ ಭೇಟಿ

ಭಾರತ ವಿದ್ಯಾ ಮಂತ್ರಿಗಳೂ, ಸಿ ಎಸ್ ಐ ಆರ್ ಉಪಾಧ್ಯಕ್ಷರೂ ಆದ ಶ್ರೀ ಚಾಗ್ಲಾಂವು ಶನಿವಾರ ಕೇಂದ್ರ ಆಹಾರ ಸಂಶೋಧನಾಲಯಕ್ಕೆ ಭೇಟಿ ಕೊಟ್ಟು ಅಲ್ಲಿಯ ಎಲ್ಲಾ ಯಂತ್ರಾಗಾರಗಳನ್ನೂ ಪರಿಶೀಲಿಸಿ ಪೈಲಟ್ ಪ್ಲಾಂಟ್ ಕಾರ್ಯಾಗಾರವನ್ನು ಉದ್ಘಾಟಿಸಿದರು ; ಇಲ್ಲಿಂದ ನಮ್ಮ ವಿದೇಶಿನಿಮಯಕ್ಕೆ ಸಹಾಯಕವಾಗುವುದೆಂದರು ; ಅವರ ಭಾಷಣದಲ್ಲಿ, ಆಹಾರ ವಿಚಾರದಲ್ಲಿ ಭಾರತವು ಸ್ವಯಂಪರಿಪೂರ್ಣವಾಗುವ ಅವಶ್ಯಕತೆ ಮತ್ತು ಆಹಾರ ನಷ್ಟವಾಗದಿರುವದು ಅವಶ್ಯವೆಂದರು : ಆಹಾರ ಕೆಡದಂತಿಡುವ ಸಂಶೋಧನಾ ವಿಧಾನಕ್ಕೆ ತುಂಬಾ ಸಂತೋಷಪಟ್ಟರು : ಸಂಶೋಧನಾದೃಷ್ಟಿಯ ಕಾರ್ಯಕಲಾಪದ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿ ಕಾರ್ಯಕರ್ತರನ್ನು ಅಭಿನಂದಿಸಿದರು : ಸಂಶೋಧನಾಲಯದ ಡೈರೆಕ್ಟರು ಡಾ॥ ಪಾರ್ಥಿಯವರು ಸ್ವಾಗತ ಭಾಷಣ ಮಾಡಿದರು.

★

ರೀಜನಲ್ ಕಾಲೇಜಿಗೆ ಚಾಗ್ಲಾರ ಭೇಟಿ

ಭಾರತ ವಿದ್ಯಾಮಂತ್ರಿ ಶ್ರೀ ಚಾಗ್ಲಾರವರು ಶನಿವಾರ ರೀಜನಲ್ ಕಾಲೇಜ್ ಆಫ್ ಎಜುಕೇಷನ್ ಕಟ್ಟಡವನ್ನು ಉದ್ಘಾಟಿಸಿದರು : ಕಾಲೇಜಿನಲ್ಲಿನ ವಿವಿಧ ಇಲಾಖೆಗಳು ಮತ್ತು ಚಟುವಟಿಕೆಗಳನ್ನು ಪರಿಶೀಲಿಸಿ ಪ್ರಶಂಸಿಸಿದರು

★

ಸತ್ತವನು ಬದುಕಿದ

ಬೈಕೂಟು ವಾರ್ತೆ ಇದು ; ಅಲ್ಲಿಯ ಖದೀಮ ನೌಕಾಪಳದವನೊಬ್ಬನು ಮೊನ್ನೆ ಆಸ್ಪತ್ರೆಗೆ ಸೇರಿಸಲ್ಪಟ್ಟನು ; ನಂತರ ಸತ್ತುಹೋದನೆಂದು ಡಾಕ್ಟರಯ ಶವದ ಕೋಣೆಗೆ ಹಾಕಿಸಿದರು : ನಿನ್ನೆ ಅಲ್ಲಿ ಹೋಗಿ ನೋಡಲಾಗಿ ಅವನು ಒದ್ದು ಕಿರುಚುವುದನ್ನು ಕಂಡು ಡಾಕ್ಟರುವಿಸ್ಮಯಗೊಂಡರು , ಈಗ ಅತನಿಗೆ ಆಸ್ಪತ್ರೆಯಲ್ಲಿ ಒಳ್ಳೇ ಶಿಷ್ರೂಷೆ ಪಡೆಯುತ್ತಿದ್ದಾನೆ.

SHAKTI SUDHA

A Superb Tonic

ಆಶೋಕ ಏಜೆನೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

ರೋಗಿಗಳಿಗೆ ಸೂಕ್ತ ಔಷಧಿ ಕೊಡಲಾಗುತ್ತದೆ

Help The Gorakshana

Mysore Dasara Exhibition – 1965

The Exhibition will be held from 26–9–1965 to 27–10–1965 (both days inclusive).

Several Central and State Governments & leading Industrial Concerns participate.

Cultural Programmes by eminent Artistes will be arranged.

Last date for receiving the applica ions :

1	For Ordinary Cultural Programmes	26-8-1965
2	For Stalls	31-8-1965
3	Arts & Crafts Section	10-9-1965
4	Tender stalls, island spaces, open spaces canteens, cycle stand, supply of patromax light, van with mike and loud speakers van on hire for Office use, supply of scenic arrangements on hire basis etc, together with tender deposit of Rs 100/- for each item	13-9-1965 before 4 p.m.
5	Exhibits for Ladies section	20-9-1965

For further details contact i

(R. RAJANNA) Secretary

ವುಡಲ್ಯಾಂಡ್ಸ್ ಜಯಪ್ರದ 2 ನೇ ವಾರ

ಅಮೋಘ ಆರಂಭ

ಜಾಹಿರ್ ಹುಸೇನ್ — ರಾಜಶ್ರೀಯವರ ಕಲಾತ್ಮಕ ಅಭಿನಯದಿಂದ ಕೂಡಿದ

.... ಚಿತ್ತಾಕರ್ಷಕ ಹಿಂದಿ ಚಿತ್ರವಿನ್ನ ....

ಜೀ ಚಾಹ್‌ತಾ ಹೈ

★ Ji Chahta Hai ★

ಸಂಗೀತ : ಕಲ್ಯಾಣಜೀ ಆನಂದಜೀ — [ಪ್ರತಿ ದಿನ 3 ಪ್ರದರ್ಶನಗಳು

ಅಪೆರ್ — ಯಶಸ್ವಿ 2ನೇ ವಾರ

ದೊರಕಿತೆ ದೊಂಗಲು (ತೆಲುಗು)

ನಟವರ್ಗ — ಎನ್ ಟಿ ರಾಮರಾವ್, ಕಾಂತಾರಾವ್, ರಾಜಶ್ರೀ, ರಾಜಲಕ್ಷ್ಮಿ ಜಮುನಾ, ಗುಮ್ಮಡಿ, ರಮಣರೆಡ್ಡಿ, ನಾಗಯ್ಯ

ತೆಲುಗು ಪತ್ತೇದಾರಿ ಚಿತ್ರ] [ಪ್ರತಿ ದಿನ 3 ಆಟಗಳು

Protect the Cow

ಗೋಸಂರಕ್ಷಣೆ ಮತ್ತು ವ್ಯಾಪಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

Edited, Printed & Published by Dharmaprachara niratha M S Krishna Rao (Proprietor) at the Satyavadi Press Chamarajapuram, Mysore 4